ಊ) ಮೇಲ್ಕಂಡ ವಾಹನ ಸಂಚಾರ ದಟ್ಟಣೆಗೆ ಐ.ಆರ್.ಸಿ. ಅನುಸಾರ ಈಗಿರುವ ಚತುಷ್ಪಥ ರಸ್ತೆ ಹೊರತುಪಡಿಸಿ ಹೆಚ್ಚುವರಿಯಾಗಿ ಚತುಷ್ಪಥ ರಸ್ತೆ ನಿರ್ಮಾಣ ಅವಶ್ಯವಿದ್ದು, ಈ ಬಗ್ಗೆ ಪರಿಶೀಲಿಸಲಾಗುವುದು. ಅಂಡರ್ ಪಾಸ್ ರಸ್ತೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಸದರಿ ವಿಷಯವು ರಾಮನಗರ, ಚನ್ನಪಟ್ಟಣ ಮುನಿಸಿಪಾಲಿಟಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆ.

ಋ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಅನ್ವಯಿಸುವುದಿಲ್ಲ.

ಎ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಅನ್ವಯಿಸುವುದಿಲ್ಲ.

ಬಿ.ಪಿ.ಎಲ್. ಮತ್ತು ಎ.ಪಿ.ಎಲ್. ಪಡಿತರ ಚೀಟಿ ವಿತರಿಸುವುದು

1031 (1446) ಶ್ರೀರಾಜು ಕೆ. (ರಾಮನಗರ) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆಯಲ್ಲಿ ಇದುವರೆವಿಗೂ ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) ರಾಮನಗರ ಜಿಲ್ಲೆಯಲ್ಲಿ ಪಡಿತರ ಚೀಟಿಯ ವಿತರಣೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು (ಪ್ರತಿಯನ್ನು ನೀಡುವುದು);

ಈ) ಪಡಿತರ ಚೀಟಿಯನ್ನು ವಿತರಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು (ಪ್ರತಿಯನ್ನು ನೀಡುವುದು);

ಉ) ರಾಮನಗರ ಜಿಲ್ಲೆಯಲ್ಲಿ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ಸಮರ್ಪಕವಾಗಿ ವಿತರಿಸಲಾಗಿದೆಯೇ;

ಊ) ಹಾಗಿಲ್ಲದಿದ್ದಲ್ಲಿ ಸಮರ್ಪಕವಾಗಿ ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು) :

ಅ) ರಾಮನಗರ ಜಿಲ್ಲೆಯಲ್ಲಿ ಇದುವರೆವಿಗೂ 19,887 ಎಎವೈ, 1,92,690 ಬಿಪಿಎಲ್ ಮತ್ತು 1,05,963 ಎಪಿಎಲ್ ಪಡಿತರ ಚೀಟಿ ವಿತರಿಸಲಾಗಿದೆ.

	ಎಎವೈ	ಬಿಪಿಎಲ್	ಎಪಿಎಲ್	ಒಟ್ಟು
ಮಾಗಡಿ	5284	36985	19185	61454
ಚನ್ನಪಟ್ಟಣ	4576	42724	28920	76220
ರಾಮನಗರ	4491	46789	24509	75789
ಕನಕಪುರ	5536	66192	33349	105077
ಒಟ್ಟು	**19,887**	**1,92,690**	**1,05,963**	**3,18,540**

ಆ) ಇಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಬಿಪಿಎಲ್ ಪಡಿತರ ಚೀಟಿಗಳನ್ನು ಮಂಜೂರು ಮಾಡುವಾಗ ಈ ಕೆಳಕಂಡ ಮಾನದಂಡಗಳಿಗೆ ಒಳಪಟ್ಟಿರುವರನ್ನು ಬಿಪಿಲ್ ಪಡಿತರ ಚೀಟಿ ಪಡೆಯಲು ಅನರ್ಹರೆಂದು ಪರಿಗಣಿಸಲಾಗುತ್ತದೆ.

ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ :

i) ಎಲ್ಲಾ ಬುಡಕಟ್ಟು (Primitive tribe) ಕುಟುಂಬಗಳು

ii) ವಿಧವೆ ಅಥವಾ ಅನಾರೋಗ್ಯ ಪೀಡಿತ ವ್ಯಕ್ತಿಗಳು ಅಥವಾ 60 ಹಾಗೂ 60 ಕ್ಕೆ ಮೇಲ್ಪಟ್ಟ ವಯಸ್ಸಿನ ವ್ಯಕ್ತಿಗಳ ಜೀವನ ನಿರ್ವಹಣೆಗೆ ಯಾವುದೇ ನಿಶ್ಚಿತ ಆದಾಯವಿಲ್ಲದೆ/ ಸಾಮಾಜಿಕ ನೆರವಿಲ್ಲದ ಕುಟುಂಬಗಳವರು.

iii) ವಿಧವೆ ಅಥವಾ ಅನಾರೋಗ್ಯ ಪೀಡಿತ ವ್ಯಕ್ತಿಗಳು/ ಅಂಗವಿಕಲರು/ 60 ಅಥವಾ 60 ವರ್ಷಕ್ಕಿಂತ ಮೇಲ್ಪಟ್ಟ ಒಂಟಿ ಮಹಿಳೆಯರು ಅಥವಾ ಒಂಟಿ ಪುರುಷರು ಜೀವ ನಿರ್ವಹಣೆಗೆ ಯಾವುದೇ ನಿಶ್ಚಿತ ಆದಾಯವಿಲ್ಲದ/ ಸಾಮಾಜಿಕ ನೆರವಿಲ್ಲದ ಕುಟುಂಬಗಳವರು.

ಬಿಪಿಎಲ್ (ಅಕ್ಷಯ) ಪಡಿತರ ಚೀಟಿ:

ಗ್ರಾಮಾಂತರ ಪ್ರದೇಶದಲ್ಲಿ 12,000/– ರೂ.ಗಳವರೆಗಿನ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ, 17,000/– ರೂ.ಗಳವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ ಪಡಿತರ ಚೀಟಿ ಪಡೆಯಲು ಅರ್ಹರಿರುವುದಿಲ್ಲ.

(1) 3 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನವಾದ ನೀರಾವರಿ ಭೂಮಿ ಹೊಂದಿರುವವರು.

(2) ಸ್ಥಿರ ದೂರವಾಣಿ ಹೊಂದಿರುವವರು (ಮೊಬೈಲ್ ದೂರವಾಣಿ ಹೊರತುಪಡಿಸಿ)

(3) ಸ್ವಂತವಾಗಿ ಯಾರೇ ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ/ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)

(4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು;

(5) ಒಂದು ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು

(6) ತಿಂಗಳಿಗೆ ರೂ.1,000 ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ ಖಾಸಗಿ ಸಿಬ್ಬಂದಿಗಳು

(7) ಆದಾಯ ತೆರಿಗೆ ಪಾವತಿಸುವವರು

(8) ರಿಜಿಸ್ಟರ್ಡ್ ಕಾಂಟ್ರಾಕ್ಟರ್, ಎಪಿಎಂಸಿ ಟ್ರೇಡರ್ಸ್/ಕಮೀಷನ್ ಏಜೆಂಟ್ಸ್/ಬೀಜ/ರಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು.

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು.

ನಗರ ಪ್ರದೇಶದಲ್ಲಿ ಮೇಲ್ಕಂಡ ಮಾನ ದಂಡಗಳ ಜೊತೆಗೆ ಈ ಕೆಳಕಂಡ ಮಾನದಂಡಗಳು ಒಳಗೊಂಡಿರುತ್ತವೆ:

(1) 20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.

(2) ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.

(3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ.2000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

ಎಪಿಎಲ್ ಪಡಿತರ ಚೀಟಿ :

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ 12,000/– ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ, ಪಟ್ಟಣ ಪ್ರದೇಶದಲ್ಲಿ 17,000/– ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ ಆದಾಯವುಳ್ಳ ಕುಟುಂಬಗಳು ಎಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ.

ಉ) ಹೌದು.

ಊ) ಉದ್ಭವಿಸುವುದಿಲ್ಲ.

ರೈತರ ವಿದೇಶ ಪ್ರವಾಸ

1033 (795) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ. ಎಂ. ಲೇಔಟ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 2009 ರಿಂದ ಇಲ್ಲಿಯವರೆಗೆ ಎಷ್ಟು ಜನ ರೈತರನ್ನು ಚೀನಾ ಮುಂತಾದ ಪ್ರದೇಶ ಪ್ರವಾಸಕ್ಕೆ ಕಳುಹಿಸಲಾಯಿತು;

ಆ) ಈ ವಿದೇಶ ಪ್ರವಾಸಕ್ಕೆ ನಿಯೋಜಿಸಲು ಅನುಸರಿಸಿದ ಮಾನದಂಡವೇನು;